# ಸಮಗ್ರ ಶಿಕ್ಷಣ ಉಡುಪಿ

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ರಜತಾದ್ರಿ ಮಣಿಪಾಲ-576104, ಉಡುಪಿ ಜಿಲ್ಲೆ

ಫೋನ್/ಫ್ಯಾಕ್ಸ್: 08202575383 E Mail: ssaudupi@gmail.com


ಸಂ: ಸಶಿಅ/ಜಿ..ಅ.ಮೇ.ಸ.ನಡಾವಳಿ/2019-20 ದಿನಾಂಕ:25.02.2020

ರಿಗೆ,

ಪರಿಸರ ನಿರ್ವಹಣೆ ಮತ್ತು
ನೀತಿ ಸಂಶೋಧನಾ ಸಂಸ್ಥೆ
"ಹಸಿರು ಭವನ" ದೊರೆಸಾನಿ ಪಾಳ್ಯ ಅರಣ್ಯ ಆವರಣ
ವಿನಾಯಕ ನಗರ ವೃತ್ತ, ಜೆ.ಪಿ. ನಗರ
5ನೇ ಹಂತ ಬೆಂಗಳೂರು-560078

ಮಾನ್ಯರೇ,

ವಿಷಯ: ರಾಷ್ಟ್ರೀಯ ಹಸಿರು ಪಡೆ ( National Green Corps GC) ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಮಟ್ಟದ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯ ಸಭೆಯ ನಡಾವಳಿ ಸಲ್ಲಿಸುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ :ಎಂಪ್ರಿ/ಸಿ.ಆರ್.-15.ಎನ್‌ಜಿಸಿ/2019-20/1312 ದಿನಾಂಕ :29.11.2020

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಉಡುಪಿ ಜಿಲ್ಲೆಯ ಜಿಲ್ಲಾ ಮಟ್ಟದ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯ ಸಭೆಯನ್ನು ದಿನಾಂಕ:24.02.2020ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗಿದೆ. ಸದ್ರಿ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಉಪನಿರ್ದೇಶಕರು ಆಡಳಿತ ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸಮಗ್ರ ಶಿಕ್ಷಣ ಅಭಿಯಾನ
ಸಾ.ಶಿ. ಇಲಾಖೆ ಉಡುಪಿ ಜಿಲ್ಲೆ

ಪ್ರತಿ: 1.ಕಛೇರಿ ಪ್ರತಿ.

ಸಮಗ್ರ ಶಿಕ್ಷಣ ಉಡುಪಿ
ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ರಜತಾದ್ರಿ ಮಣಿಪಾಲ-576104, ಉಡುಪಿ ಜಿಲ್ಲೆ
ಫೋನ್/ಫ್ಯಾಕ್ಸ್: 08202575383 E Mail: ssaudupi@gmail.com

ದಿನಾಂಕ:24.02.2020ರಂದು ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಇಕೋ ಕ್ಲಬ್‌ಗಳ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಯ ನಡಾವಳಿಗಳು:

ಸಭೆಯಲ್ಲಿ ಉಪಸ್ಥಿತರಿದ್ದವರು.

| | | |
|---|---|---|
| 1 | ಶ್ರೀ ಸದಾಶಿವ ಪ್ರಭು | ಮಾನ್ಯ ಅಪರ ಜಿಲ್ಲಾಧಿಕಾರಿಯವರು, ಉಡುಪಿ |
| 2 | ಶ್ರೀ ಶೇಷಶಯನ ಕೆ. | ಉಪನಿರ್ದೇಶಕರು ಸಾ.ಶಿ.ಇಲಾಖೆ, ಉಡುಪಿ |
| 3 | ಶ್ರೀ ಮಾರುತಿ | ಉಪನಿರ್ದೇಶಕರು ಪ.ಪೂ. ಇಲಾಖೆ, ಉಡುಪಿ |
| 4 | ಶ್ರೀ ಎಚ್ ಆರ್, ಸುಬ್ರಮಣ್ಯ | ಉಪ ಅರಣ್ಯ ಸಂರಕ್ಷಣಾಧಿಕಾರಿ ಉಡುಪಿ |
| 5 | ಶ್ರೀಮತಿ ವಿಜಯ ಹೆಗ್ಡೆ | ಪರಿಸರ ಅಧಿಕಾರಿ. ಪ.ಮತ್ತು ಮಾ.ನಿಯಂತ್ರಣ ಮಂಡಳಿ ಉಡುಪಿ |
| 6 | ಶ್ರೀ ಶೇಷಪ್ಪ | ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ |
| 7 | ಪ್ರಭಾಕರ ಮಿತ್ಯಾಂತ | ಉಪಯೋಜನಾ ಸಮನ್ವಯಾಧಿಕಾರಿ ಸ.ಶಿ.ಕ.ಉಡುಪಿ |
| 8 | ಶ್ರೀ ಸುಬ್ರಮಣ್ಯ | ಸಹಾಯಕ ಯೋಜನಾ ಸಮನ್ವಯಾಧಿಕಾರಿ ಸ.ಶಿ.ಕ.ಉಡುಪಿ |
| 9 | ಶ್ರೀ ಎನ್ ಎ ಮಧ್ಯಸ್ಥ | ಪರಿಸರ ತಜ್ಞರು ಉಡುಪಿ |
| 10 | ಶ್ರೀಮತಿ ಸತ್ಯಶ್ರೀ | ರಾಜ್ಯ ಕಾರ್ಯಕ್ರಮಾಧಿಕಾರಿ, ಎಂಪ್ರಿ |
| 11 | ಶ್ರೀಮತಿ ಲಕ್ಷ್ಮೀ ಬಾಯಿ | ಸಂಚಾಲಕರು ಭಾರತೀಯ ವಿಕಾಸ ಟ್ರಸ್ಟ್, ಮಣಿಪಾಲ |
| 12 | ಶ್ರೀ ಓ.ಆರ್. ಪ್ರಕಾಶ್ | ಕ್ಷೇತ್ರ ಶಿಕ್ಷಣಾಧಿಕಾರಿ ಬ್ರಹ್ಮಾವರ |
| 13 | ಶ್ರೀ ಶಶಿಧರ | ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಕಳ |
| 14 | ಶ್ರೀ ಅಶೋಕ್ ಕಾಮತ್ | ಕ್ಷೇತ್ರ ಶಿಕ್ಷಣಾಧಿಕಾರಿ ಕುಂದಾಪುರ |
| 15 | ಶ್ರೀಮತಿ ಮಂಜುಳ | ಕ್ಷೇತ್ರ ಶಿಕ್ಷಣಾಧಿಕಾರಿ ಉಡುಪಿ |
| 16 | ಶ್ರೀಮತಿ ಜ್ಯೋತಿ | ಕ್ಷೇತ್ರ ಶಿಕ್ಷಣಾಧಿಕಾರಿ ಬೈಂದೂರು |
| 17 | ಶ್ರೀಮತಿ ನಿರ್ಮಲ | ಮುಖ್ಯ ಶಿಕ್ಷಕರು. ಸ.ಪ್ರೌ.ಶಾಲೆ ಒಳಕಾಡು |
| 18 | ಶ್ರೀ ಅಶೋಕ್ ಕುಮಾರ್ ಶೆಟ್ಟಿ | ಮುಖ್ಯ ಶಿಕ್ಷಕರು. ಶ್ರೀನಿಕೇತನ ಪ್ರೌ.ಶಾಲೆ ಮಟಪಾಡಿ |
| 19 | ಶ್ರೀ ಬಾಲಕೃಷ್ಣ | ಮುಖ್ಯ ಶಿಕ್ಷಕರು. ಸ.ಪ್ರೌ.ಶಾಲೆ ರಾಜೀವ ನಗರ |
| 20 | ಶ್ರೀ ಬಿ.ಟಿ.ನಾಯಕ್ | ಮುಖ್ಯ ಶಿಕ್ಷಕರು. ಸ.ಪ್ರೌ.ಶಾಲೆ ಬ್ರಹ್ಮಾವರ |
| 21 | ಸಿಸ್ಟರ್ ಪ್ರೀತಿ ಕ್ರಾಸ್ತ | ಮುಖ್ಯ ಶಿಕ್ಷಕರು. ಸೈಂಟ್ ಸಿಸಿಲಿ ಪ್ರೌ.ಶಾಲೆ ಉಡುಪಿ |
| 22 | ಶ್ರೀ ಶಿವಪ್ರಸಾದ್ ಅಡಿಗ | ರಾಜ್ಯ ಸಂಪನ್ಮೂಲ ವ್ಯಕ್ತಿ |
| 23 | ಕುಮಾರಿ ಸ್ಮಿತ | ಕಾರ್ಯಕ್ರಮ ಸಹಾಯಕರು |

ಶ್ರೀ ಸದಾಶಿವ ಪ್ರಭು ಮಾನ್ಯ ಅಪರ ಜಿಲ್ಲಾಧಿಕಾರಿ, ಉಡುಪಿ ಇವರ ಅಧ್ಯಕ್ಷತೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಇಕೋ ಕ್ಲಬ್‌ಗಳ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ ನಡೆಯಿತು. ಪ್ರಾರಂಭದಲ್ಲಿ ಉಪಯೋಜನಾ ಸಮನ್ವಯಾಧಿಕಾರಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸ್ವಾಗತಿಸಿದರು. ನಂತರ ಶ್ರೀ ಸುಬ್ರಮಣ್ಯ ಸಹಾಯಕ ಯೋಜನಾ ಸಮನ್ವಯಾಧಿಕಾರಿಯವರು ಪ್ರಾಸ್ತಾವಿಕವಾಗಿ ಇಕೋ ಕ್ಲಬ್ ಚಟುವಟಿಯ ಬಗ್ಗೆ ಮತ್ತು ಈ ವರ್ಷ ಜಿಲ್ಲೆಯ 323 ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮತ್ತು 177 ಪ್ರೌಢಶಾಲೆಗಳಿಗೆ ತಲಾ ರೂ 5000/-ದಂತೆ ಎಂಪ್ರಿಯಿಂದ

ಅನುದಾನ ಬಿಡುಗಡೆಯಾಗಿರುವ ಬಗ್ಗೆ ಸಭೆಗೆ ತಿಳಿಸಿದರು. ಸದರಿ ಸಭೆಯಲ್ಲಿ ಸದಸ್ಯರೆಲ್ಲರೂ ಚರ್ಚಿಸಿ ಕೆಳಕಂಡಂತೆ ನಿರ್ಣಯಗಳನ್ನು ಅಂಗೀಕರಿಸಲಾಯಿತು:

1. ಶ್ರೀಮತಿ ಸತ್ಯಶ್ರೀ ಪ್ರೋಗ್ರಾಂ ಅಧಿಕಾರಿಗಳು ಎಂಪ್ರಿ ಸಂಸ್ಥೆ ಬೆಂಗಳೂರು ಇವರ ಸಲಹೆಯಂತೆ ಸಮಗ್ರ ಶಿಕ್ಷಣ ಇಲಾಖೆಯ ಸಹಕಾರದಿಂದ ಪ್ರತಿ ವರ್ಷ ಮಾರ್ಚ್ ಕೊನೆಯ ವೇಳೆಗೆ ಇಕೋ ಕ್ಲಬ್ ಇರುವ ಶಾಲೆಯ ಮೌಲ್ಯ ಮಾಪನ ಮಾಡಿ ಜಿಲ್ಲಾ ಹಂತದ ಉತ್ತಮ ಇಕೋ ಕ್ಲಬ್ ಶಾಲೆಯನ್ನು ಆಯ್ಕೆಮಾಡುವುದು.
2. ಒಂದು ವಸ್ತುವನ್ನು ತಯಾರಿಸುವುದರಿಂದ ಹಿಡಿದು ಬಿಸಾಡುವ ಹಂತದ ವರೆಗಿನ ಪರಿಕಲ್ಪನೆಗಳನ್ನು ಮಕ್ಕಳಿಗೆ ಇಕೋ ಕ್ಲಬ್‌ನಲ್ಲಿ ಮನದಟ್ಟು ಮಾಡಲು ತೀರ್ಮಾನಿಸಲಾಯಿತು.
3. ಉಪ ಅರಣ್ಯ ಸಂರಕ್ಷಣಾಧಿಕಾರಿ ಉಡುಪಿ ಇವರು ಪ್ರತಿ ಶಾಲೆಯಲ್ಲಿ ಶಾಲಾವನವನ್ನು ನಿರ್ಮಿಸಲು ಗಿಡಗಳನ್ನು ಉಚಿತವಾಗಿ ನೀಡುವುದಾಗಿ ತಿಳಿಸಿದರು. ಅದರಂತೆ ಎಲ್ಲಾ ಶಾಲೆಯವರು ಕ್ರಮವಹಿಸುವುದು.
4. ಕಾರ್ಕಳ ವಲಯದ ಸ.ಹಿ.ಪ್ರಾ.ಶಾಲೆ ಮುಳಕಾಡು ಇಲ್ಲಿ ಉತ್ತಮ ಉದ್ಯಾನವನ ನಿರ್ಮಿಸಿದ್ದು ಈ ಶಾಲೆಗೆ ಇಕೋ ಕ್ಲಬ್ ಮಂಜೂರಾತಿ ನೀಡಲು ಎಂಪ್ರಿ ಸಂಸ್ಥೆಗೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.
5. ಮಾನ್ಯ ಅಪರ ಜಿಲ್ಲಾಧಿಕಾರಿಯವರು ಸಾವಯವ ಕೃಷಿಯನ್ನು ಉತ್ತೇಜಿಸಲು ಪ್ರಾಲಕರಲ್ಲಿ ಇದರ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಇಕೋ ಕ್ಲಬ್‌ಗಳಲ್ಲಿ ಕೈಗೊಳ್ಳಬೇಕೆಂದು ತಿಳಿಸಿದ್ದು, ಅದರಂತೆ ಕ್ರಮ ಕೈಗೊಳ್ಳಲು ಶಾಲೆಗಳಿಗೆ ಸೂಚನೆ ನೀಡಲು ತೀರ್ಮಾನಿಸಲಾಯಿತು ಮತ್ತು ಇಕೋ ಕ್ಲಬ್‌ನ ಎಲ್ಲಾ ಚಟುವಟಿಕೆಯನ್ನು ಚಾರ್ಟ್ ಮೂಲಕ ಶಾಲೆಗಳಲ್ಲಿ ಪ್ರದರ್ಶಿಸುವುದು.
6. ಎನ್ ಎ. ಮಧ್ಯಸ್ಥ ಅವರು ಕೃಷಿ ಹಾಗೂ ಪರಿಸರ ಸಂಬಂಧಿತ ಚಟುವಟಿಕೆಗಳನ್ನು ಶಾಲೆಗಳಲ್ಲಿ ಅಳವಡಿಸುವುದರ ಜೊತೆಗೆ ಪ್ರಾಯೋಗಿಕವಾಗಿ ಪರಿಸರದಲ್ಲೇ ಅನುಭವೀ ಕೃಷಿಕರಿಂದ ಮಕ್ಕಳಿಗೆ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರಿಂದ ಮಕ್ಕಳಿಗೆ ಕೃಷಿಯ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಸಾಧ್ಯ ಎಂದು ತಿಳಿಸಿದರು ಅದರಂತೆ ಎಲ್ಲಾ ಇಕೋ ಕ್ಲಬ್‌ಗಳು ಕ್ರಮ ವಹಿಸುವುದು.
7. ಶಾಲೆಯಲ್ಲಿ ಇಕೋ ಕ್ಲಬ್‌ನ ಪ್ರತಿ ವಿದ್ಯಾರ್ಥಿಯು ಒಂದು ಗಿಡವನ್ನು ಬೆಳೆಸುವ ಜವಬ್ದಾರಿಯನ್ನು ತೆಗೆದುಕೊಂಡು ಅದರ ಬೆಳವಣಿಗೆಯ ಸಂಪೂರ್ಣ ಮಾಹಿತಿಯನ್ನು ಕಲೆ ಹಾಕುವುದು ಮತ್ತು ಆ ಗಿಡದ ಬಗ್ಗೆ ಅಧ್ಯಯನ ಮಾಡುವುದು.
8. ಶಾಲಾ ಪರಿಸರದ ಔಷಧಿ ವನ, ಉದ್ಯಾನವನ, ಕೃಷಿ ತೋಟ ಇತ್ಯಾದಿಗಳಿಗೆ ಇಕೋ ಕ್ಲಬ್ ಸದಸ್ಯರು ಭೇಟಿ ನೀಡಿ ಮಾಹಿತಿ ಸಂಗ್ರಹಿಸುವುದು. ಮತ್ತು ಶಾಲೆಗಳಲ್ಲಿ ಔಷಧಿ ವನ, ಉದ್ಯಾನವನ, ಕೃಷಿ ತೋಟ ಅಳವಡಿಸುವದು.
9. ಸಮುದಾಯದ ಸಹಬಾಗಿತ್ವದೊಂದಿಗೆ ಇಕೋ ಕ್ಲಬ್ ಸದಸ್ಯರು sewage Treatment plant(STP)ನ್ನು ನಿರ್ಮಿಸಿ ಶಾಲೆಯ ವೇಸ್ಟ್ ನೀರನ್ನು ಪುರ್ನಬಳಕೆ ಮಾಡಿ ಗಿಡಗಳಿಗೆ ಉಪಯೋಗಿಸಲು ಕ್ರಮ ವಹಿಸುವುದು. ಮತ್ತು ವೇಸ್ಟ್ ಫುಡ್, ತರಕಾರಿ ಕಸ ಬಳಕೆ ಮಾಡುವ ಬಗ್ಗೆ ಇಕೋ ಕ್ಲಬ್‌ನಲ್ಲಿ ಮಾಹಿತಿ ನೀಡುವುದು.
10. ರಾಜ್ಯ ಸಂಪನ್ಮೂಲ ವ್ಯಕ್ತಿ ಶ್ರೀ ಶಿವಪ್ರಸಾದ್ ಅಡಿಗ ಅವರು ಸುಡುಮಣ್ಣನ್ನು (burnt soil) ಉಪಯೋಗಿಸಿಕೊಂಡು ಕೃಷಿ ಮಾಡುವ ಬಗ್ಗೆ ಹಾಗೂ ಅದು ಬ್ಯಾಕ್ಟೀರಿಯಾ ಮೇಲೆ ಪರಿಣಾಮವನ್ನು ಬೀರುವುದರ ಬಗ್ಗೆ ವಿವರಣೆಯನ್ನು ನೀಡಿದ್ದು ಅದರಂತೆ ಶಾಲೆಗಳ ಇಕೋ ಕ್ಲಬ್ ಸದಸ್ಯರು ಕ್ರಮ ವಹಿಸುವುದು.
11. ಪೆನ್ಸಿಲ್‌ನ ಬದಲಾಗಿ ಪೇಪರ್ ಪೆನ್ಸಿಲ್ ಹಾಗೂ use and throw pen ನ ಬದಲಾಗಿ ರೀಫಿಲ್ ಪೆನ್ನನ್ನು ಬಳಸುವುದರ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲು ಇಕೋ ಕ್ಲಬ್‌ನಲ್ಲಿ ಕ್ರಮ ವಹಿಸುವುದು.
12. ಪರಿಸರ ಮಾಲಿನ್ಯ ನಿಯಂತ್ರಣಾಧಿಕಾರಿಗಳಾದ ಶ್ರೀಮತಿ ವಿಜಯ ಹೆಗ್ಡೆಯವರ ಸಲಹೆಯಂತೆ ಎಲ್ಲಾ ಶಾಲೆಗಳಲ್ಲು ಬಟ್ಟೆ ಚೀಲವನ್ನು ಬಳಸುವ ಬಗ್ಗೆ ಇಕೋ ಕ್ಲಬ್‌ನಲ್ಲಿ ಕ್ರಮ ವಹಿಸುವುದು.

13. ಉಪನಿರ್ದೇಶಕರು ಪ.ಪೂ. ಇಲಾಖೆ, ಉಡುಪಿ ಇವರ ಸಲಹೆಯಂತೆ ಮುಂದಿನ ವರ್ಷಗಳಲ್ಲಿ ಪದವಿ ಪೂರ್ವ ಕಾಲೇಜುಗಳಲ್ಲಿ ಇಕೋ ಕ್ಲಬ್ ಮಂಜೂರಾತಿಗೆ ಎಂಟ್ರಿ ಸಂಸ್ಥೆಯವರು ಕ್ರಮವನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು

14. ನಮ್ಮ ಶಾಲೆ ನಮ್ಮ ತೋಟ ಎಂಬ ಕಾರ್ಯಕ್ರಮವನ್ನು ಜಿಲ್ಲೆಯ ಎಲ್ಲಾ ಇಕೋ ಕ್ಲಬ್ ಶಾಲೆಗಳಲ್ಲಿ ಮುಂದಿನ ವರ್ಷದಲ್ಲಿ ಅಳವಡಿಸಲು ಮತ್ತು ವಿವಿಧ ತರಕಾರಿ ಗಿಡಗಳನ್ನು, ಹಣ್ಣಿನ ಗಿಡಗಳನ್ನು, ಔಷಧಿ ಗಿಡಗಳನ್ನು ಬೆಳೆಸಲು ತೀರ್ಮಾನಿಸಲಾಯಿತು.

15. ಇಕೋ ಕ್ಲಬ್‌ಗಳ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಗೆ ತೋಟಗಾರಿಕಾ ಇಲಾಖೆಯನ್ನು ಸದಸ್ಯರಾಗಿ ಆಯ್ಕೆ ಮಾಡಲು ತೀರ್ಮಾನಿಸಲಾಯಿತು.

16. ಉಪನಿರ್ದೇಶಕರು ಸಾ.ಶಿ.ಇಲಾಖೆ, ಉಡುಪಿ ಇವರ ಸಲಹೆಯಂತೆ ಮನೆಯಲ್ಲಿ ಮಕ್ಕಳು ಹಸಿರು ಸಸ್ಯಗಳನ್ನು ಬೆಳೆಸುವ ಬಗ್ಗೆ ಪಾಲಕರಿಗೆ ಮನವರಿಕೆ ಮಾಡಲು ತೀರ್ಮಾನಿಸಲಾಯಿತು.

17. ಶಾಲೆಯ ಸುತ್ತ ಮುತ್ತ ಇರುವ ಖಾಲಿ ಜಾಗದಲ್ಲಿ ಕೃಷಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು

ಸ.

ಶ್ರೀ ಸದಾಶಿವ ಪ್ರಭು

ಅಪರ ಜಿಲ್ಲಾಧಿಕಾರಿಯವರು, ಉಡುಪಿ